**2020ನೇ ಸಾಲಿನ ಇಂಗ್ಲೆಂಡಿನ 'ಟಿ.ಎಸ್. ಎಲಿಯೆಟ್ ಕಾವ್ಯಪ್ರಶಸ್ತಿ' ಭಾರತ ಮೂಲದ ಕವಯಿತ್ರಿ ಭಾನು ಕಪಿಲ್ ಅವರ ಕವನ ಸಂಕಲನ 'ಹೌ ಐ ವಾಶ್ ಅ ಹಾರ್ಟ್'ಗೆ ಸಂದಿದೆ. 25 ಸಾವಿರ ಪೌಂಡು(ಸುಮಾರು 25 ಲಕ್ಷ ರೂಪಾಯಿ)ಗಳ ಈ ಪ್ರಶಸ್ತಿ, ಮೊತ್ತದ ದೃಷ್ಟಿಯಿಂದಲ್ಲ ಗುಣಮಟ್ಟದಿಂದಲೂ ಮುಖ್ಯವಾಗಿದೆ. ಅವರ ಕಾವ್ಯದ ಬಗೆಗಿನ ಲೇಖನ ಇಲ್ಲಿದೆ.**

ಭಾರತೀಯ ಮೂಲದ ಕಾದಂಬರಿಕಾರರು ಪಾಶ್ಚಾತ್ಯ ಜಗತ್ತಿನ ಅದೆಷ್ಟೋ ಗಮನಾರ್ಹ ಪ್ರಶಸ್ತಿಗಳನ್ನು ಪಡೆದುಕೊಂಡಿದ್ದಾರೆ. ಕಾದಂಬರಿ ಪ್ರಕಾರಕ್ಕೆ ನೀಡಿದ ವಿಶಿಷ್ಟ ಕೊಡುಗೆಗಾಗಿ ಸಲ್ಮಾನ್ ರಶ್ದೀ, ವಿಕ್ರಮ್ ಸೇಠ್, ಅಮಿತಾವ್ ಘೋಷ್‌ರಂತಹ ಲೇಖಕರಿಗೆ ಪ್ರತಿಷ್ಠಿತ ಪ್ರಶಸ್ತಿಗಳು ಬಂದಿವೆ. ಆದರೆ, ಈ ವರೆಗೆ, ಕಾವ್ಯಪ್ರಕಾರದಲ್ಲಿ ಕಣ್ಸೆಳೆಯುವ ಮನ್ನಣೆ ಅಷ್ಟಾಗಿ ಭಾರತೀಯ ಸಂಜಾತ, ವಲಸಿಗ ಲೇಖಕರಿಗೆ ದೊರೆತಂತಿಲ್ಲ. ಈ ಹಿನ್ನೆಲೆಯಲ್ಲಿ, ಇಂಗ್ಲೆಂಡ್ ಮತ್ತು ಐರ್ಲೆಂಡ್‌ಗಳಲ್ಲಿ ಪ್ರಕಟಗೊಂಡ ಕಾವ್ಯಸಂಕಲನಗಳಿಗೆ ಕೊಡುವ ಇಂಗ್ಲೆಂಡಿನ ಉನ್ನತವಾದ 'ಟಿ.ಎಸ್. ಎಲಿಯೆಟ್ ಕಾವ್ಯಪ್ರಶಸ್ತಿ' ಭಾನು ಕಪಿಲ್ ಅವರ ಕವನ ಸಂಗ್ರಹ 'ಹೌ ಟು ವಾಶ್ ಅ ಹಾರ್ಟ್'ಗೆ ಸಂದಿದೆ.

ಮಾಡರ್ನಿಸ್ಟ್ ಕಾವ್ಯದ ಅಗ್ರಮಾನ್ಯ ಕವಿ, ಜಾಗತಿಕವಾಗಿ ತಮ್ಮ ಕಾವ್ಯ, ನಾಟಕ, ವಿಮರ್ಶೆಗಳಿಂದ ಓದುಗರ ಮೇಲೆ ಅಪಾರ ಪ್ರಭಾವ ಬೀರಿದ ಲೇಖಕ ಟಿ.ಎಸ್. ಎಲಿಯಟ್ 1953ರಲ್ಲಿ 'ಪೋಯೆಟ್ರಿ ಬುಕ್ ಸೊಸೈಟಿ'ಯನ್ನು ಸ್ಥಾಪಿಸಿದ್ದರು. ಅದು 40 ವರ್ಷಗಳನ್ನು ಪೂರ್ಣಗೊಳಿಸಿದ ಸಂದರ್ಭದಲ್ಲಿ (1993) 'ಟಿ.ಎಸ್. ಎಲಿಯಟ್ ಫೌಂಡೇಶನ್' 25 ಸಾವಿರ ಪೌಂಡುಗಳ ಈ ಕಾವ್ಯಪ್ರಶಸ್ತಿಯನ್ನು ಸ್ಥಾಪಿಸಿತು. ಅಂತರರಾಷ್ಟ್ರೀಯ ಮಟ್ಟದಲ್ಲಿ ಗುರುತಿಸಿಕೊಂಡಿರುವ ಅಗ್ರಗಣ್ಯ ಕವಿಗಳು ಆಯ್ಕೆ ಸಮಿತಿಯಲ್ಲಿರುವ ಪ್ರಶಸ್ತಿ ಇದು. ಈ ಪ್ರಶಸ್ತಿಯನ್ನು ಪಡೆದ ಹಿಂದಿನ ಖ್ಯಾತನಾಮರಲ್ಲಿ ಡೆರೆಕ್ ವಾಲ್ಕಾಟ್, ಕ್ಯಾರಲ್ ಆನ್ ಡಫಿ, ಟೆಡ್ ಹ್ಯೂಸ್, ಶೀಮ್ಸ್ ಹೀನಿ ಸೇರಿದ್ದಾರೆ.

'ಸಿಂಗರಿಸುವುದಿಲ್ಲ ನಾನು ನಮ್ಮ ಸಾಮೂಹಿಕ ವೇದನೆಯನ್ನು' ಎನ್ನುವ ಸಾಲುಗಳಲ್ಲಿ ಸಮಕಾಲೀನ ವಿಶ್ವದಲ್ಲಿ ಎಲ್ಲೆಲ್ಲೋ ನೆಲೆಸಿರುವ ವಲಸಿಗ ಸಮುದಾಯಗಳು ಅನುಭವಿಸಿದ ಮಾನಸಿಕ ಕ್ಷೋಭೆಗಳ ಇತಿಹಾಸ ಸಾಹಿತ್ಯದಲ್ಲಿ ಬರುವ ಬಗೆಯನ್ನು ಭಾನು ಕಪಿಲ್ ಪ್ರತಿನಿಧಿಸುತ್ತಾರೆ. 'ಟಿ.ಎಸ್. ಎಲಿಯೆಟ್ ಕಾವ್ಯಪ್ರಶಸ್ತಿ' ಸಂದ ಮೊದಲ ಭಾರತೀಯ ಮೂಲದ ಕವಯಿತ್ರಿ ಇವರು. ಪಂಜಾಬ್ ಮೂಲದ ಭಾನು ಜನಿಸಿದ್ದು ಲಂಡನ್ನಿನಲ್ಲಿ. ಬಾಲ್ಯದಿಂದಲೇ ಬರವಣಿಗೆಯಲ್ಲಿ ಆಸಕ್ತಿ ಹೊಂದಿದ್ದ ಅವರ ಮೇಲೆ ಆ ದಿನಗಳಲ್ಲಿ ಕಾದಂಬರಿಕಾರ ಸಲ್ಮಾನ್ ರಶ್ದೀ ಪ್ರಭಾವ ಬೀರಿದ್ದರಂತೆ. 1981ರಲ್ಲಿ ರಶ್ದೀ ಅವರಿಗೆ ಬಂದ ಬೂಕರ್ ಪ್ರಶಸ್ತಿಯು, 'ನನ್ನಂತವರೂ, ನನ್ನಂತೆ ಕಾಣುವವರೂ ಬರಹಗಾರರಾಗಬಹುದೆಂದು ಕಲಿಸಿತು' ಎಂದಿದ್ದಾರೆ. 1990ರಲ್ಲಿ ಉನ್ನತ ವ್ಯಾಸಂಗಕ್ಕಾಗಿ ಅಮೆರಿಕೆಗೆ ಹೋದ ಭಾನು ಕಪಿಲ್ ಅಲ್ಲಿನ ನರೋಪಾ ವಿಶ್ವವಿದ್ಯಾಲಯ ಮತ್ತು ಗೋಡಾರ್ಡ್